ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 14ನೇ ಅಕ್ಟೋಬರ್ 1884.

ಮಾಹೆ ಗುಜಸ್ತಾ 1ನೇ ಮುಕ್ತುಮಿನ ರಾತ್ರಿ ಬೆಂಕೀಪುರ–ಶಿವಮೊಗ್ಗಾ ರಸ್ತೆಯಲ್ಲಿ ಟಪ್ಪಾಲ್ ಚೋರಿ ನಜಿಸಿದ ಜನಗಳ ಪತ್ತೇ ಬಗ್ಗೆ ಅನುಕೂಲವಾದ ವರ್ತಮಾನವನ್ನು ಕೊಡುವವರಿಗೆ 50 ರೂಪಾಯಿಗಳ ಇನಾಂ ಕೊಡಲ್ಪಡುವದು.

ಇದರಡೀ ತಪಸೀಲ್ ಕಂಡ ಮಾಲ್‌ಗಳು ಚೋರಿ ಹೋಗಿರುವಂತೆ ರಿಪೋರ್ಟಾಗಿರುತ್ತೆ:–

ಭಾಂಗೀ ನಂಬರ್ 1.

	ರೂ.	ಆ.	ಪೈ.
ಸುಮಾರು 25 ವರಹಾ ತೂಕದ ಅಡ್ಡಿಕೆ ಕೆಂಪು ಬಂಣದ ತಲೆ ಹಾಕಿದೆ ..	130	0	0
ಹೊಸಧಾರದಲ್ಲಿ ಪೋಣಿಸಿದ ಭಂಗಾರದ ಗುಂಡಿನ ಸರ, 46 ಗುಂಟು 1 ಹವಳ ಪೋಣಿಸಿರುತ್ತೆ, ಸುಮಾರು 18 ರೂಪಾಯಿ ತೂಕ	100	0	0
ಭಂಗಾರದ ಬಾವಲಿ ಸುತ್ತಲೂ ಹಳೇಮುತ್ತು ಹಾಕಿರುತ್ತೆ	20	0	0
ಬಳ್ಳೀ ಪಾಡಗ, ಮಕ್ಕಳ ಬಾಬತು	5	0	0

ಭಾಂಗೀ ನಂಬರ್ 2.

ಒಂದು ಜೊತೆ ಹೊಸಧೋತ್ರ	10	0	0

ಸೈಯದ್ ನಸಿರುದ್ದೀನ್,
ಫಾರ್ ಡೆಪ್ಯೂಟಿ ಕಮ್ಮಿಷನರಿ.

ಕಡೂರು ಡಿಸ್ಟ್ರಿಕ್ಟ್.

ತಾರೀಖು 20ನೇ ಅಕ್ಟೋಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಕೊಪ್ಪ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಶೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಆಗಾಯತು ಒಂದು ತಿಂಗಳ ಒಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನ ವಾಪಸ್ ತೆಗದುಕೊಳ್ಳಬೇಕು. ತಪ್ಪಿದರೆ 1877ನೇ ಇಸವಿ ಮೂರನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳನ್ನ ನಾಶಪಡಿಸಲ್ಪಡುವವು.

ದಸ್ತಾವೇಜು ನಂಬರು.	ದಸ್ತಾವೇಜು ತಾರೀಖು ಸಹಿ.	ರಿಜಿಸ್ಟ್ರಿ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು.	ದಸ್ತಾವೇಜು ಬರಸಿ ಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ.
ನಿರಾಕರಣೆ ನಂ. 1	24–5–81	28–10–81	ದೇವತಮನೆ ಗ್ರಾಮ ವಾಸಸ್ಥ ಮಂಜಭಟ್ಟರ ಮಗ ಫಣಿಭಟ್ಟ	ಹರಿಹರಪುರ ಈಸಬಾ ಹಜಾರ ಗ್ರಾಮ ವಾಸಸ್ಥ ಸುಬ್ಬಾಭಟ್ಟರಮಗ ಕಾಡಭಟ್ಟ	ಯೆಜದಂಟಿ ಗ್ರಾಮ ದೇವರಮನೆ ಸ್ಥಳದಲ್ಲಿ ಸರ್ವೆನಂಬರ್ 40ನೇ ಬಾಗಾಯಿತು ಕಂದಾಯ 21–1–0 ಡಿಟೋ ಗ್ರಾಮ ಸರ್ವೆ ನಂ. 39ನೇ ತರೀ ಖಂಡಿ ಎಕ್ಕೆ ಕಂದಾಯ 3–14–5 ಸರ್ವೆ ನಂಬರ್ 33ನೇ ತರೀ ಖಂಡಿ ಎಕ್ಕೆ ರೂ. 4–2–7 ದೇವರಮನೆ ಸ್ಥಳದಲ್ಲಿ ಇರುವ 6 ಅಂಕಣ ಮನೆ ಸಹ 150 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುತ್ತೇನೆಂತ.

ಬಿ. ಕೆ. ವೆಂಕಟವರದಯ್ಯಂಗಾರ್,
ಫಾರ್ ರಿಜಿಸ್ಟ್ರಾರ್.